## ಮಾತು-ಕತೆ

● 'ಟಗರು' ಮತ್ತು 'ಕೆಂಡಸಂಪಿಗೆ' ಇವೆರಡೂ ಒಂದೇ ಬಗೆಯ ವ್ಯಾಪಾರ ಅನಿಸತ್ತಾ ನಿಮಗೆ?

ನನಗೆ ಈ ಎರಡು ಸಿನಿಮಾ ಮಾಡುವಾಗಲೂ ತುಂಬ ಕ್ಲಾರಿಟಿ ಇತ್ತು. 'ಕೆಂಡಸಂಪಿಗೆ' ಸಿನಿಮಾ ಮಾಡುತ್ತಿರುವುದು ನನ್ನ ಸ್ನೇಹಬಳಗಕ್ಕಾಗಿ ಎಂಬ ಕ್ಲಾರಿಟಿ ನನಗಿತ್ತು. 'ಕೆಂಡಸಂಪಿಗೆ' ನಾನೇ ನಿರ್ಮಾಣ ಮಾಡಿದೆ. ಯಾಕೆಂದರೆ ಬೇರೆ ನಿರ್ಮಾಪಕರಿಗೆ ನಾನು ಆ 'ಥಾಟ್' ಅನ್ನು ಅರ್ಥ ಮಾಡಿಸಲಿಕ್ಕೆ ಆಗಲ್ಲ. 'ಕಾಗೆಬಂಗಾರ' ಸಿನಿಮಾ ನಿರ್ಮಾಣ ಮಾಡೋಕೆ ಮುಂದೆ ಬಂದ ಎಷ್ಟೋ ನಿರ್ಮಾಪಕರಿಗೆ ನಾನೇ ಬೇಡ ಅಂತ ಹೇಳಿದೀನಿ. 'ಟಗರು' ನಿರ್ಮಾಪಕ ಶ್ರೀಕಾಂತ್ 'ಕಾಗೆ ಬಂಗಾರ ನಿಮ್ಮ ಆಸೆಯ ಸಿನಿಮಾ ಅಲ್ವಾ. ಅದನ್ನು ಮಾಡಿ' ಅಂದ್ರು. ನಾನು ಒಪ್ಪಲಿಲ್ಲ. ಮತ್ತೆ ನಾನು ಕಮರ್ಷಿಯಲ್ ಸಿನಿಮಾ ಮಾಡ್ಬೇಕು. ನನಗಿನ್ನೂ ಫುಡ್ ಬೇಕು.

ಚಾರ್ಲಿ ಚಾಪ್ಲಿನ್‌ನಿಂದ ಹಿಡಿದು ಮಣಿರತ್ನಂವರೆಗೆ ಎಷ್ಟೆಲ್ಲ ಜನರು ಸಿನಿಮಾಗೆ ಸರಿಯಾದ ಅಡಿಪಾಯ ಹಾಕಿಕೊಟ್ಟಿದ್ದಾರೆ. ಸುಮ್ನೆ ಅಲ್ಲ ಸಿನಿಮಾ. ಗಟ್ಟಿಮುಟ್ಟಾದ ಬುನಾದಿ ಇದೆ. ನಿಂತ್ ಆಡಕ್ಕೆ ಬರ್ಬೇಕು.

● ಸಿನಿಮಾ ಸ್ಕ್ರಿಪ್ಟ್ ಗೊತ್ತಿಲ್ಲ ಅಂತೀರಿ. ಸಿನಿಮಾ ಗೊತ್ತಿಲ್ಲ ಅಂತೀರಿ. ಕ್ಲಾರಿಟಿ ಇರಬೇಕು ಅಂತ್ಲೂ ಹೇಳ್ತೀರಿ. ವೈರುಧ್ಯ ಅಲ್ವಾ ಇದು?

ಅಲ್ಲಲ್ಲ, ಅಡುಗೆ ಕಲಿಯೋಕೆ ಹೋಗ್ಬೇಕು. ಹಾಗೆ ಹೋಗ್ಬೇಕಾದ್ರೆ ನನಗೆ ಅಡುಗೆಯ ಹುಚ್ಚು ಮೊದಲಿನಿಂದಲೂ ಇರಬೇಕು. ಹುಚ್ಚಿದ್ದಾಗ ಮಾತ್ರ ಅಲ್ಲಿ ಬೆಳೆಯಲು, ಉಳಿಯಲು ಸಾಧ್ಯ. 'ಈ ಹುಡುಗನಿಗೆ ಈರುಳ್ಳಿ ಕಟ್ ಮಾಡೋದು ಗೊತ್ತಿದೆ' ಅಂತ ಆ ಕೆಲಸ ಕೊಡ್ತಾರೆ. ಎಲ್ಲವನ್ನು ಕತ್ತರಿಸಿಕೊಟ್ಟವರು ಬೇರೆಯವರೇ. ಆದರೆ ನಿಂತುಕೊಂಡು ಅವನ್ನೆಲ್ಲ ಬೆರೆಸಿ ಬಿರಿಯಾನಿ ಮಾಡುವ ಜಾದೂ ಇದೆ ನೋಡಿ. ಆ ಉರಿ, ಎಣ್ಣೆ... ಯಾವ ಟೈಮಲ್ಲಿ ಏನು ಹಾಕಿ ಎಷ್ಟು ತಿರುವಬೇಕು ಎಂಬ ಹದ ಇರ್ತದಲ್ಲಾ? ಅದು ಅಡುಗೆ. ಇದಕ್ಕೆ ಯಾವ ಎಜುಕೇಶನ್ ಬೇಕು ಹೇಳಿ? ಯಾವ ಟೆಕ್ಸ್ಟ್‌ಬುಕ್ ಇದನ್ನು ಕಲಿಸಿಕೊಡ್ಲಿಕ್ಕೆ ಸಾಧ್ಯ ಹೇಳಿ? ನಾನೂ ಹೀಗೆ ಈರುಳ್ಳಿ ಕಟ್ ಮಾಡುವ ಕೆಲಸದಿಂದಲೇ ಶುರುಮಾಡಿ ಬಿರಿಯಾನಿ ಮಾಡಲು ಕಲಿತಿದ್ದು.

ಸಿನಿಮಾದಲ್ಲಿಯೂ ಹಂಗೆ. ಸಿನಿಮಾ ಮಾಡೋಕೆ ಲೆನ್ಸ್ ಕಂಡುಹಿಡಿದೋನು ಯಾರು ಅನ್ನೋದು ಬೇಕಾ? ನಾನು ಬುಕ್ ಇಟ್ಕೊಂಡು ಏನೂ ಕಲಿಯಲಿಲ್ಲ ಎಂದು ಹೇಳಿದೆ ಅಷ್ಟೆ.

ನಾನು ಕಲಿತಿದ್ದು ಬಿರಿಯಾನಿ ಮಾಡುವುದನ್ನು. ನಾನು ಕಾವೇರಿ ನಗರದ ಕುರಿತಷ್ಟೇ ಮಾತಾಡಬಲ್ಲೆ. ಡಾಲರ್ಸ್ ಕಾಲೋನಿ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಜೀವನದೃಷ್ಟಿ ಇನ್ನೊಬ್ಬರದಲ್ಲ, ಎಲ್ಲೋ ಓದಿದ್ದಲ್ಲ. ಮತ್ತೆ ಅಲ್ಲಿಗೇ ಬರುವುದಾದರೆ – ಅನ್ನಕ್ಕೋಸ್ಕರ ಕೆಲಸ ಮಾಡಿ, ಆಗ ಅದರ ಫಲಿತಾಂಶವೇ ಬೇರೆ ಇರುತ್ತೆ.

● ಫುಡ್ಡಿಗೋಸ್ಕರ ಮಾಡ್ತೀರಿ ಅನ್ನೋದು ಸರಿ. 'ಟಗರು'ವಿನಂಥ ಇನ್ನಷ್ಟು ಸಿನಿಮಾ ಮಾಡಿದರೆ ಇನ್ನೂ ಒಳ್ಳೆಯ ಫುಡ್ ಸಿಗತ್ತೆ ನಿಮಗೆ. ಆದ್ರೂ ಹೆಚ್ಚಿನ ಫುಡ್ ಕೊಡಲಾಗದ 'ಕೆಂಡಸಂಪಿಗೆ', 'ಕಾಗೆಬಂಗಾರ' ಮಾಡಬೇಕು ಅಂತ ಅನಿಸುತ್ತದಲ್ಲ. ಏಕೆ?

ನಾನು ಹೋಟೆಲಲ್ಲಿ ಮಾರುವ ಅಡುಗೆಯೇ ಬೇರೆ, ಮನೆಗೆ ಫ್ರೆಂಡ್ಸ್ ಬಂದಾಗ ಮಾಡುವ ಅಡುಗೆಯೇ ಬೇರೆ. ಮನೆಯಲ್ಲಿ ಮಾಡುವ ಅಡುಗೆ ನನ್ನಿಷ್ಟದ್ದು. ಅದನ್ನು ನನ್ನ ಫ್ರೆಂಡ್ಸಿಗೆ ಮಾಡಿ ಬಡಿಸುತ್ತೇನೆ. ಕಮರ್ಷಿಯಲ್ ಆಗಿ ದುಡಿಯುತ್ತಿರುವವರ ಬಳಿ ಹೋಗಿ ಆ ಅಡುಗೆ ಮಾಡಬಾರದು.